ನಾನು ಹಿಂದೆಮುಂದೆ ನೋಡುವುದಿಲ್ಲ. ಆದದ್ದಾಗುತ್ತದೆ'' ಕೋಪದಿಂದ ಆತ ಆರ್ಭಟಿಸಿದ.

''ಭೀಮಸೇನ, ನೌಕರರ ಖಾಸಗಿ ಜೀವನದ ಬಗ್ಗೆ ಕಂಪನಿ ತಕರಾರೆತ್ತುವುದಿಲ್ಲ. ಆದರೆ, ಅದು ಕಂಪನಿಯ ಗೇಟು ದಾಟಿ ಒಳಗೆ ಬರಬಾರದು. ನೀನು ಅದನ್ನು ನೆನಪಿಟ್ಟುಕೊಳ್ಳಬೇಕು ಅಷ್ಟೆ'' ಎಂದೆ ನಾನು.

''ಸರಿ ಸರ್'' ಎನ್ನುತ್ತಲೇ ಕೋಪದಿಂದ ಬಿರಬಿರನೆ ಹೊರ ನಡೆದ ಭೀಮಸೇನ.

ಸಂಜೆ ಹೋಗಿ ಮ್ಯಾನೇಜರರಿಗೆ ಎಲ್ಲ ವೃತ್ತಾಂತ ತಿಳಿಸಿದೆ. ಮ್ಯಾನೇಜರ್ ಗಂಭೀರವಾದರು. ''ಹಾಗಿದ್ರೆ ಈ ಖದೀಮರ ನಡುವೆ ಬದುಕಿಕೊಳ್ಳಲು ಭೀಮಸೇನ ನನ್ನ ಹೆಸರು ಬಳಸಿಕೊಳ್ಳುತ್ತಿದ್ದ. ಮೊದಲು ನಮ್ಮ ಕೆಲಸದಾಕೆಯನ್ನು ಮನೆಯಿಂದ ಓಡಿಸಲು ಹೇಳುತ್ತೇನೆ. ಅವಳ ಸಂಪರ್ಕ ಬಯಸಿ ಲೀಗೋ ಮತ್ತವನ ಗೆಳೆಯರು ಭೀಮಸೇನನ ಮೇಲೆ ಒತ್ತಾಯ ಹಾಕುತ್ತಿದ್ದರು ಅನ್ನಿಸುತ್ತೆ. ಲೀಗೋ ಮತ್ತು ಆ ಮೂರು ಹುಡುಗರಿಗೂ ದುರ್ನಡತೆಯ ಕಾರಣಕ್ಕೆ ಟರ್ಮಿನೇಶನ್ ನೋಟಿಸ್ ಕೊಡು'' ಎಂದರು.

''ಮತ್ತೆ ಭೀಮಸೇನನಿಗೂ ಆಕೆಗೂ ಸಂಬಂಧ ಉಂಟಾ? ಇದ್ದರೆ ಆತನನ್ನೂ ಕಳಿಸಿಬಿಡು'' ಅಂದರು ಮ್ಯಾನೇಜರ್.

''ನನಗೆ ಮಾಹಿತಿ ಇಲ್ಲ ಸರ್. ಇದ್ದರೂ ಅದು ಆತನ ಖಾಸಗಿ ಬದುಕು. ಆಫೀಸಿನ ಹೊರಗಿನ ಬದುಕು. ನಮಗೇನೂ ಸಂಬಂಧ ಇಲ್ಲ. ಆತನ ಕೆಲಸದ ಬಗ್ಗೆ ಕೂಡ ಏನೂ ಕಂಪ್ಲೇಂಟಿಲ್ಲ ಸರ್'' ಎಂದೆ ನಾನು.

''ಓಕೆ ಇರ್ಲಿ ಹಾಗಾದ್ರೆ'' ಎಂದರು ಮ್ಯಾನೇಜರ್.

★★★

ಮರುದಿನ ಬೆಳಗ್ಗೆ ನಾನು ಬರುವಾಗಲೇ ಹೊಸ ಸುದ್ದಿ ಸಿಕ್ಕಿತ್ತು. ಆಫೀಸಿಗೆ ಬರುತ್ತಿದ್ದ ಲಿಗೋನನ್ನು ಬೆಂಬತ್ತಿ ಬಂದ ಭೀಮಸೇನ ಇಡೀ ಆಫೀಸಿಗೆ ಕೇಳುವ ಹಾಗೆ, ''ಸಾಲೇ... ಬೆಹೆನ್ ಚೋದ್, ತೂ ಮೇರಾ ಕಂಪ್ಲೇಂಟ್ ಲಿಖ್ ವಾಯಾ? ಬಾಹರ್ ಆಜಾ, ದೇಖ್ ಲೂಂಗ ತೇರೇಕೊ'' ಎಂದು ಬೊಬ್ಬೆ ಹೊಡೆದನಂತೆ.

ಸುದ್ದಿ ತಿಳಿದ ಮ್ಯಾನೇಜರರು ನೇರ ನನ್ನ ಕ್ಯಾಬಿನ್ನಿಗೆ ಬಂದು, ''ಭೀಮಸೇನ ಲಿಗೋನಿಗೆ ಬೆಹೆನ್ ಚೋದ್ ಅಂತ ಬೈದನಂತೆ. ಸಾಲಾ ಎಂದವನನ್ನೇ ಈ ಹಿಂದೆ ನಾವು ಟರ್ಮಿನೇಟ್ ಮಾಡಿದ್ದೇವೆ. ಇನ್ನು ಇವನನ್ನು ಹೇಗೆ ಬಿಟ್ಟುಬಿಡೋದು? ಅವನಿಗೂ ನೋಟಿಸ್ ಕೊಡು. ಅವನೂ ಹೋಗಲಿ. ನಮ್ಮ ನೆಮ್ಮದಿ ಕೆಡಿಸುವ ಎಲ್ಲರೂ ತೊಲಗಲಿ'' ಎಂದರು.

ನಮ್ಮಲ್ಲಿ ಹಾಗೆಯೇ. ನೌಕರರಲ್ಲಿ ಶಿಸ್ತು ಮುಖ್ಯ.


## ಗೋಪೀನಾಥ ರಾವ್

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟ್ಪಾಡಿ. ತಂದೆ ಪ್ರಸಿದ್ಧ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ತಾಯಿ ಮುತ್ತಮ್ಮ. ವೃತ್ತಿಯಲ್ಲಿ ಲೆಕ್ಕಪರಿಶೋಧಕ. ಪ್ರಸ್ತುತ ದುಬೈಯಲ್ಲಿ ಉದ್ಯೋಗ. 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?' ಅವರ ಪ್ರಕಟಿತ ಕಥಾಸಂಕಲನಗಳು.